ಅಪ್ಯಾಯಮಾನವಾಗಿದ್ದವು.

ರೂಮಿನಿಂದ ಓಣಿಗುಂಟ ಸಾಗಿ ಹತ್ತು ನಿಮಿಷದ ದಾರಿ ಹಿಡಿದರೆ ಪಬ್ಲಿಕ್ ಸ್ಟಡಿ ಹಾಲ್ ಇತ್ತು, ನೋಡಲು ತುಂಬಾ ವಿಶಾಲವಾಗಿ ಗ್ರಂಥಾಲಯದ ಮಾದರಿಯಲ್ಲೇ ಇತ್ತು, ಸಾಲಾಗಿ ಇದ್ದ ಡೆಸ್ಕ್‌ಗಳಲ್ಲಿ ಪುಸ್ತಕಗಳನ್ನಿಟ್ಟುಕೊಂಡು ಓದಲು ಜಾಗ ಮತ್ತದರ ಮುಂದೆ ಸಾಲಾಗಿ ಕುರ್ಚಿಗಳಿದ್ದವು. ತಿಂಗಳಿಗೆ ಇಷ್ಟು ಫೀ, ಮೂರು ತಿಂಗಳಿಗಿಷ್ಟು ಫೀ ಅಂತ ಗೋಡೆ ಮೇಲೆ ಅಂಟಿಸಿದ್ದರು ಜೊತೆಗೆ 'All Great Readers are Leaders' ಅನ್ನುವ ಅಡಿಬರಹ ನೋಡಿ ಮೈ ಜುಮ್ಮೆಂದಿತ್ತು. ಮೂರು ತಿಂಗಳಿನ ಫೀ ಭರಿಸಿ ಲೈಬ್ರರಿಯನ್ನೂ ಸೇರಿದ್ದಾಯ್ತು. ಲೈಬ್ರರಿಯೊಳಗೆ ಮೊದಲನೇ ದಿನ ಹೋದಾಗ, ಅಲ್ಲಿ ಓದಲು ಬಂದವರನ್ನ ನೋಡಿ ರಾಯಣ್ಣ ಗಾಬರಿಗೊಂಡಿದ್ದ. ತುಂಬಾನೇ ಗಂಭೀರವಾಗಿ ಓದುವವರು ಅವರ ಡೆಸ್ಕ್‌ನಲ್ಲಿದ್ದ IAS, KAS ಎಂಬ ದಪ್ಪ ದಪ್ಪ ಪುಸ್ತಕಗಳು, ಇನ್ನೂ ಕೆಲವರ ಮುಖದ ಮೇಲಿನ ಕಪ್ಪು ಚಿಂತೆಗಳು, ವಯಸ್ಸಿನ ಗೆರೆಗಳು ಮತ್ತು ಆಗತಾನೇ ಬಂದಿರುವವರ ಪುಸ್ತಕದೊಳಗಿನ ಗೊಂದಲಮಯ ಹುಡುಕಾಟ. ಭವಿಷ್ಯವನ್ನೇ ಆ ಡೆಸ್ಕಿನಲ್ಲಿ ಇಟ್ಟು, ಅದಕ್ಕೆ ಆಕಾರ ತೀಡಿ, ಬಣ್ಣ ಹೊಡೆಯುತ್ತಿರುವ ಕಲಾಕಾರರಂತೆ ಒಮ್ಮೆ ಭಾಸವಾಯಿತು!

ಅಂತೂ ಮೊದಲನೇ ದಿನ ರಾಯಣ್ಣನಿಗೆ ತನ್ನ ಕನಸುಗಳನ್ನೆಲ್ಲ ಕೂಡಿ ಹಾಕಿ ತನ್ನ ಭವಿಷ್ಯದ ಚಿತ್ರವನ್ನ ತಾನೇ ಬಿಡಿಸುವ ಹುರುಪಿನಲ್ಲಿದ್ದ. ತನ್ನೆಲ್ಲಾ ಪುಸ್ತಕಗಳನ್ನೂ ನೀಟಾಗಿ ಹೊಂದಿಸಿ, ಓದುವ ದಿನಚರಿಯನ್ನೂ ಬರೆದು ಡೆಸ್ಕ್‌ನ ಮೇಲೆ ಅಂಟಿಸಿದ. ಸುತ್ತಲೂ ಇರುವ ಅಪರಿಚಿತ ಅಲೆಗಳ ನಡುವೆ ತಾನೂ ತೀರ ಸೇರಬಲ್ಲೆ ಎಂಬ ಉತ್ಸಾಹ ಮನಸ್ಸಿನಲ್ಲಿ ಗಟ್ಟಿಯಾಗಿ ಬೇರೂರಿ ಖುಷಿಯಿಂದಲೇ ಓದಲು ಶುರುಮಾಡಿದ.

ಅವತ್ತು ಸಂಜೆ ಓದುತ್ತಿರುವಾಗ ಲೈಬ್ರರಿಯೊಳಗೆ ಬಂದ ಹುಡುಗರ ದಂಡು, ಒಂದಷ್ಟು ಪ್ಯಾಂಪ್ಲೆಟ್‌ಗಳನ್ನ ಕೈಯಲ್ಲಿ ಹಿಡಿದುಕೊಂಡು ಬಂದಿದ್ದರು, ಅವರ ಗುಂಪಿನಿಂದ ಒಬ್ಬ ಮುಂದೆ ಬಂದು ಜೋರು ಧ್ವನಿಯಲ್ಲಿ 'ಫ್ರೆಂಡ್ಸ್ ನಾವು ನಾಳೆ ಬೆಳಿಗ್ಗೆ ಸಪ್ತಾಪುರ ಸರ್ಕಲ್ ಹತ್ರ ಒಂದು ಸ್ಟ್ರೈಕ್ ಮಾಡ್ತಿದ್ದೇವೆ, ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ನಡೀತಿರೊ ಅಕ್ರಮಗಳ ವಿರುದ್ಧ, ಯಾಕಂದ್ರೆ ನಿಮಗೆ ಗೊತ್ತೇ ಇದೆ ಇತ್ತೀಚೆಗೆ ನಡೀತಿರೊ ಸ್ಪರ್ಧಾತ್ಮಕ ಪರೀಕ್ಷೆಗಳು ಎಷ್ಟು ಪಾರದರ್ಶಕವಾಗಿ ನಡೀತಿದಾವೆ ಅಂತ. ನಾವೆಲ್ಲ ಎಲ್ಲೆಲ್ಲಿಂದಾನೊ ಓದೋಕೆ ಅಂತ ಹೊಟ್ಟೆಬಟ್ಟೆ ಕಟ್ಟಿ, ಕಾಸು ಕೂಡಿಸಿ ಓದೋಕೆ ಅಂತ ಬಂದು ಪರೀಕ್ಷೆಗಳಿಗೆ ತಯಾರಾಗಿ, ಎಕ್ಸಾಮ್ಸ್‌ಗಳನ್ನ ಬರೀತೀವಿ. ಆದರೆ ಈ ಅಕ್ರಮಗಳು ಎಷ್ಟೋ ವಿದ್ಯಾರ್ಥಿಗಳ ಪ್ರಯತ್ನಗಳನ್ನ ಮಣ್ಣುಪಾಲು ಮಾಡಿ ಸಮಾಧಿ ಕಟ್ತಿದಾವೆ. ಫ್ರೆಂಡ್ಸ್, ಇವುಗಳ ವಿರುದ್ಧ ನಾವು ಧ್ವನಿ ಎತ್ತಬೇಕು ಇಲ್ಲದೆ ಹೋದ್ರೆ ನಾವು ಪರೀಕ್ಷೆ ಬರೆಯುವ ವಯಸ್ಸು ಮುಗಿಯೋತನಕ ಈ ಡೆಸ್ಕ್‌ಗಳ ಮುಂದೆ ಗೊಂಬೆಗಳ ಹಾಗೆ ಕೂರಬೇಕಾಗುತ್ತೆ. ಸೋ ನಿವೆಲ್ಲರೂ ಈ ಕೆಲಸಕ್ಕೆ ಕೈ ಜೋಡಿಸಿ'. ಅಂತ ಹೇಳಿ ಪ್ಯಾಂಪ್ಲೆಟ್‌ಗಳನ್ನ ಹಂಚಿದರು. ಅವರೆಲ್ಲರನ್ನೂ ಆಶ್ಚರ್ಯದಿಂದ ನೋಡುತ್ತಾ ಕುಳಿತ, ತುಂಬಾ ದೊಡ್ಡವರಂತೆ ಕಾಣುತ್ತಿದ್ದ ಅವರನ್ನ ನೋಡಿ, ಅವರ ಮಾತುಗಳನ್ನ ಕೇಳಿದ ರಾಯಣ್ಣನಿಗೆ ಮೋಟಿವೇಷನಲ್ ಸ್ಪೀಕರ್ಸ್ ನೆನಪಾದರು. ಲೈಬ್ರರಿಯಲ್ಲಿ ಇದ್ದವರೆಲ್ಲರೂ ತಮ್ಮ ತಮ್ಮಲ್ಲೇ ಮಾತಾಡಿಕೊಳ್ಳತೊಡಗಿದರು.

'ಹೇ ಇಂತಾವು ಎಷ್ಟು ಸ್ಟ್ರೈಕ್ ಮಾಡಿದ್ರೂ ಅಷ್ಟೇ! ಎಕ್ಸಾಮ್ಸ್‌ಗಳ ಹಣೆಬರಾನಾ ಇಷ್ಟು. ಕುರುಡು ಕಾಂಚಾಣ ವ್ಯವಸ್ಥೆಗಳನ್ನ ಆಳ್ತಿರಬೇಕಾದರೆ ಈ ಪ್ಯಾಂಪ್ಲೆಟ್‌ಗಳು ಬರೀ ಹಾಳೆಗಳಷ್ಟೇ ವ್ಯವಸ್ಥೆಗೆ' ಅಂತ ಮಾತು ಹೊರಡುತ್ತಿರುವಾಗಲೇ ಅದಕ್ಕೆ ಪ್ರತಿಯಾಗಿ ಎನ್ನುವಂತೆ ಇನ್ನೊಬ್ಬ

'ಅಣಾ.. ವ್ಯವಸ್ಥೆ ಅಂತ ಸುಮ್ಮನ ಕುಂತುಗಂಡರ ಏನೂ ಕೆಲ್ಸ ಆಗಂಗಿಲ್ಲ ಅದಕ್ಕೂ ಸ್ವಲ್ಪ ಬಿಸಿ ಮುಟ್ಟಸಬೊಕು ಆವಾಗ್ಲೆ ಈ ಭ್ರಷ್ಟಾಚಾರ ಹೋಗಾದು. ಕಷ್ಟ ಪಟ್ಟು ಓದಿದವ್ರಿಗೂ ಕೆಲ್ಸ ಸಿಕ್ಕು ಅವರ ಬದುಕು ಬೆಳಕಾಗೋದು' ಅಂದ.

ಇವೆಲ್ಲವೂ ರಾಯಣ್ಣನಿಗೆ ತುಂಬಾ ಹೊಸದಾಗಿ ಕಂಡಿತು ಕೈಯಲ್ಲಿದ್ದ ಪ್ಯಾಂಪ್ಲೆಟ್ ನೋಡುತ್ತಾ ಸ್ಟ್ರೈಕ್‌ಗೆ ಹೋಗೊದಾ ಬೇಡ್ವಾ ಅಂತ ಗೊಂದಲದಲ್ಲೇ ಕುಳಿತ. ಅಷ್ಟರಲ್ಲೇ ಗಂಟೆ ಒಂದು ಆಗಿದ್ದು ನೋಡಿ ಊಟದ ನೆನಪಾಗಿ ಲೈಬ್ರರಿಯಿಂದ ಹೊರ ಬಂದ. ಹೊರಗೆ ಮೋಡ ಕವಿದು ಮಳೆ ಆಗುವಂತಿತ್ತು. ಲೈಬ್ರರಿ ಸುತ್ತ ಇದ್ದ ಹಸಿರು, ಮೋಡಗಳು, ಮಳೆ ಬಂದಾಗ ಏಳುವ ಕೆಂಪು